510 (776) ಶ್ರೀ ಪದ್ಮನಾಭ ಕೊಟ್ಟಾರಿ. ಕೆ. (ವಿಟ್ಲ) :– ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಸರಕಾರಿ ಪ್ರಾಥಮಿಕ ಶಾಲೆಗಳಿಗೆ ಒದಗಿಸಿ ಕೊಡಲಾಗುತ್ತಿರುವ ಸೌಲಭ್ಯಗಳನ್ನು ಅನುದಾನಿತ ಮತ್ತು ಅನುದಾನ ರಹಿತ ಶಾಲೆಗಳಿಗೂ ವಿಸ್ತರಿಸುವ ಕುರಿತು ಸರಕಾರದ ನಿಲುವೇನು;

ಆ) ಚಿಕ್ಕಮಕ್ಕಳಲ್ಲಿ ತಾರತಮ್ಯ ಭಾವನೆಯುಂಟಾಗುವ ಈ ಪದ್ಧತಿಯನ್ನು ಮಾರ್ಪಡಿಸಿ ಎಲ್ಲಾ ಮಕ್ಕಳಿಗೂ ಏಕರೀತಿಯ ಸೌಲಭ್ಯಗಳನ್ನು ಒದಗಿಸಲು ಸರಕಾರ ಗ್ರಾಮ ಕೈಗೊಳ್ಳುವುದೇ?

ಶ್ರೀ ಬಿ.ಎಸ್. ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):

ಅ) ಮತ್ತು ಆ) ಸರ್ಕಾರಿ ಪ್ರಾಥಮಿಕ ಶಾಲಾ ಮಕ್ಕಳಿಗೆ ನೀಡಲಾಗುತ್ತಿರುವ ಸೌಲಭ್ಯಗಳನ್ನು ಖಾಸಗಿ ಅನುದಾನಿತ ಹಾಗೂ ಅನುದಾನರಹಿತ ಶಾಲಾ ಮಕ್ಕಳಿಗೂ ವಿಸ್ತರಿಸುವುದರಲ್ಲಿ ಗಣನೀಯವಾದ ಆರ್ಥಿಕ ತೊಡಕುಗಳು ಒಳಗೊಂಡಿವೆ. ಪ್ರಸ್ತುತ ಶಿಕ್ಷಣ ಇಲಾಖೆಗೆ ಲಭ್ಯವಿರುವ ಆಯವ್ಯಯದ ಅವಕಾಶದಡಿ ಅದನ್ನು ಭರಿಸಲು ಆಸ್ಪದವಿಲ್ಲ.

511 (877) ಶ್ರೀ ಪಾಟೀಲ್ ಬಿ.ಸಿ. (ಹಿರೇಕೆರೂರು) :– ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಹಿರೇಕೆರೂರು ತಾಲ್ಲೂಕಿನ ಚಿಕ್ಕಯಡಚಿ ಮತ್ತು ಕುಂಚೂರು ಗ್ರಾಮಗಳನ್ನು ಶಿರಗಂಬಿ ಮತ್ತು ಉಲ್ಲತ್ತಿ ಪಂಚಾಯ್ತಿಯಿಂದ ಪ್ರತ್ಯೇಕಿಸುವ ಪ್ರಸ್ತಾವನೆ ಸರ್ಕಾರಕ್ಕೆ ಇದೆಯೇ;

ಆ) ಇದ್ದಲ್ಲಿ, ಯಾವಾಗ ಪ್ರತ್ಯೇಕಿಸಲಾಗುವುದು?

ಶ್ರೀ ಸಿ.ಎಂ. ಉದಾಸಿ(ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು):

ಅ) ಹೌದು.

ಆ) ಡಿಲಿಮಿಟೇಶನ್ ಕಮೀಷನರ್ ರವರ ಆದೇಶದಂತೆ ಲೋಕಸಭಾ ಹಾಗೂ ವಿಧಾನ ಸಭಾ ಕ್ಷೇತ್ರಗಳ ಸೀಮಾ ವಿಂಗಡಣೆ ಕಾರ್ಯ ನಡೆಯುತ್ತಿರುವುದರಿಂದ ವಿಂಗಡಣಾ ಕಾರ್ಯಮುಗಿಯುವವರೆಗೆ ಯಾವುದೇ ಗ್ರಾಮ ಪಂಚಾಯತಿಗಳ ಸರಹದ್ದನ್ನು ಮಾರ್ಪಡಿಸುವುದಾಗಲಿ, ಗ್ರಾಮ ಪಂಚಾಯತಿಗಳನ್ನು ಹೊಸದಾಗಿ ರಚಿಸಲು ಅವಕಾಶ ಇರುವುದಿಲ್ಲ. ಆದ್ದರಿಂದ ಡಿಲಿಮಿಟೇಶನ್ ಕಾರ್ಯ ಸಂಪೂರ್ಣಗೊಂಡ ನಂತರ ಪ್ರಸ್ತಾವನೆಯನ್ನು ಪರಿಗಣಿಸಲಾಗುವುದು.

512 (878) ಶ್ರೀ ಪಾಟೀಲ್ ಬಿ.ಸಿ. (ಹಿರೇಕೆರೂರು) :– ಮಾನ್ಯ ಜಲಸಂಪನ್ಮೂಲ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಹಿರೇಕೆರೂರು ತಾಲ್ಲೂಕಿನ ಮದಗ ಮಾಸೂರು ಕೆರೆಯ ವಿಸ್ತೀರ್ಣವೆಷ್ಟು;

ಆ) ಈ ಕೆರೆಯು ಒತ್ತುವರಿ ಆಗಿದೆಯೇ;

ಇ) ಕೆರೆಯ ಕೋಡಿ ಎತ್ತರಕ್ಕೇರಿಸಿ ಹೂಳೆತ್ತಲು ಸರ್ಕಾರ ಕೈಗೊಂಡ ಕ್ರಮವೇನು ;

ಈ) ಇದುವರೆವಿಗೂ ಈ ಕೆರೆಗೆ ಎಷ್ಟು ಹಣ ಖರ್ಚಾಗಿದೆ; ಯಾವ ಯಾವ ಕಾಮಗಾರಿಗೆ ಎಷ್ಟು ಹಣ ಖರ್ಚು ಮಾಡಲಾಗಿದೆ (ವಿವರ ನೀಡುವುದು) ?

ಶ್ರೀ ಕೆ.ಎಸ್. ಈಶ್ವರಪ್ಪ (ಜಲಸಂಪನ್ಮೂಲ ಸಚಿವರು):

ಅ) 167.75 ಹೆಕ್ಟೇರ್ಸ್

ಆ) ಕೆರೆಯಲ್ಲಿ ನೀರಿನ ಮಟ್ಟ ಕಡಿಮೆ ಇದ್ದಾಗ ಕೆರೆಯ ಅಂಗಳದಲ್ಲಿ ಒತ್ತುವರಿ ಕಂಡು ಬಂದಿರುತ್ತದೆ.

ಇ) ಕೋಡ ಎತ್ತರಿಸುವ ಹಾಗೂ ಹೂಳೆತ್ತುವ ಯಾವುದೇ ಪ್ರಸ್ತಾವನೆ ಇರುವುದಿಲ್ಲ.

ಈ) ಸದರಿ ಕೆರೆಯನ್ನು 2002–03ನೇ ಸಾಲಿನಲ್ಲಿ ಸಣ್ಣ ನೀರಾವರಿ ಇಲಾಖೆಯಿಂದ ಜಲಸಂಪನ್ಮೂಲ ಇಲಾಖೆಗೆ ವರ್ಗಾಯಿಸಲಾಗಿರುತ್ತದೆ. ಅಂದಿನಿಂದ ಇಲ್ಲಿಯವರೆಗೆ ಕೆರೆಯ ಕಾಲುವೆ ಆಧುನೀಕರಣ ಕಾಮಗಾರಿಗಳಿಗೆ ರೂ. 13.68 ಲಕ್ಷ, ಕೆರೆಯ ಏರಿ ರಸ್ತೆ ಕಾಮಗಾರಿಗಳಿಗೆ 2.90 ಲಕ್ಷ ಮತ್ತು ಕೆರೆಯ ನಿರ್ವಹಣಾ ಕಾಮಗಾರಿಗಳಿಗೆ ರೂ. 11.60 ಲಕ್ಷ ವೆಚ್ಚ ಮಾಡಲಾಗಿದೆ.

513 (566) ಶ್ರೀ ಪಾಟೀಲ್ ಡಿ.ಆರ್.(ಗದಗ್) :– ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) 12ನೇ ಹಣಕಾಸು ಆಯೋಗದಿಂದ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಲಭ್ಯವಿರುವ ಅನುದಾನ ಎಷ್ಟು;

ಆ) 2005–06ನೇ ಸಾಲಿನಲ್ಲಿ ಈ ಸಂಸ್ಥೆಗಳಿಗೆ ಕೇಂದ್ರದಿಂದ ರಾಜ್ಯ ಸರ್ಕಾರಕ್ಕೆ ಬಿಡುಗಡೆಯಾದ ಹಣ ಎಷ್ಟು;

ಇ) ಇದರಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಸರ್ಕಾರ ಬಿಡುಗಡೆ ಮಾಡಿದ ಹಣ ಎಷ್ಟು;

ಈ) ಕೇಂದ್ರ ಸರ್ಕಾರ ನೀಡಿದ ಅನುದಾನವನ್ನು ಪಂಚಾಯತ್ ರಾಜ್ ಸಂಸ್ಥೆಗಳಿಗೆ ವರ್ಗಾಯಿಸುವಲ್ಲಿ ಹಣ ಉಳಿಸಿಕೊಳ್ಳಲಾಗಿದೆಯೇ; ಉಳಿಸಿಕೊಂಡಿದ್ದಲ್ಲಿ ಅದಕ್ಕೆ ಕಾರಣಗಳೇನು;

ಉ) 2006–07ನೇ ಹಣಕಾಸು ವರ್ಷದಲ್ಲಿ ಕೇಂದ್ರದಿಂದ 12ನೇ ಹಣಕಾಸು ಆಯೋಗದ ನಿರ್ದೇಶನದಂತೆ ಬರಬೇಕಾದ ಒಟ್ಟು ಹಣ ಎಷ್ಟು;

ಊ) ಅದರಲ್ಲಿ ಈವರೆಗೆ ರಾಜ್ಯಕ್ಕೆ ಬಿಡುಗಡೆಯಾಗಿರುವ ಹಣ ಎಷ್ಟು;